# ಜೆನಿ ಬ್ಯಾಡ್ಮಿಂಟನ್



ಚಿಗರೆ ಕಂಗಳ, ಮುಗ್ಧ ಮುಖದ ಸುಂದರಿ ಜೆನೆಲಿಯಾ ಡಿಸೋಜಾ ಮತ್ತು ನಟ ರಿತೇಶ್ ದೇಶ್‌ಮುಖ್ ನಡುವಣ ಗೆಳೆತನದ ಬಗ್ಗೆ ನೂರೆಂಟು ಕಥೆಗಳು ಹಬ್ಬಿವೆ. ಆದರೆ ಇವರಿಬ್ಬರೂ ಪುಕಾರುಗಳಿಗೆ ಕ್ಯಾರೇ ಎನ್ನದೆ, ಪರಸ್ಪರ ಕೈ ಹಿಡಿದುಕೊಂಡು ಹೋಟೆಲ್, ಪಬ್ ಎಂದು ಸುತ್ತಾಡುವುದನ್ನು ಮಾತ್ರ ಬಿಟ್ಟಿಲ್ಲ. ಇಬ್ಬರೂ ಜತೆಯಾಗಿ ನಟಿಸುತ್ತಿರುವ '...ಲವ್ ಹೋಗಯಾ' ಚಿತ್ರದ ಶೂಟಿಂಗ್ ಮನಾಲಿಯಲ್ಲಿ ನಡೆಯುತ್ತಿದ್ದು, ಅಲ್ಲೂ ಇಬ್ಬರ ಸುತ್ತಾಟ ಛಾಯಾಗ್ರಾಹಕರಿಗೆ ಕೈತುಂಬ ಕೆಲಸ ಕೊಟ್ಟಿದೆ. ಜೆನೆಲಿಯಾಗೆ ಈ ಬಗ್ಗೆ ಕೇಳಿದರೆ, 'ಹಂಗೇನಿಲ್ಲ, ರಿತೇಶ್ ನನ್ನ ಬೆಸ್ಟ್ ಫ್ರೆಂಡ್' ಅನ್ನುತ್ತಿದ್ದಾಳೆ.

ಈ ಮಧ್ಯೆ ಜೆನೆಲಿಯಾಳಿಂದಾಗಿ ರಿತೇಶ್ ಕೂಡಾ ಬ್ಯಾಡ್ಮಿಂಟನ್ ಆಡಲು ಕಲಿತುಕೊಂಡಿದ್ದಾನಂತೆ. ಮನಾಲಿಯಲ್ಲಿ ದಿನವೂ ಬ್ಯಾಡ್ಮಿಂಟನ್ ಆಡಲು ಜೆನೆಲಿಯಾಗೆ ರಿತೇಶ್ ಜತೆ ಕೊಡುತ್ತಿದ್ದಾನಂತೆ. ಜೆನೆಲಿಯಾ ತಂದೆ ರಾಜ್ಯ ಮಟ್ಟದ ಬ್ಯಾಡ್ಮಿಂಟನ್ ಚಾಂಪಿಯನ್ ಆಗಿದ್ದವರು. ಜೆನೆಲಿಯಾ ಕೂಡಾ ರಾಜ್ಯ ಮಟ್ಟದ ಅಥ್ಲೀಟ್ ಆಗಿದ್ದವಳು. ಕಾಲೇಜಿನಲ್ಲಿ ಇದ್ದಾಗ ಈಕೆ ರಾಷ್ಟ್ರಮಟ್ಟದಲ್ಲಿ ಫುಟ್‌ಬಾಲ್ ಕೂಡಾ ಆಡಿದ್ದಳು. 15ರ ಹರೆಯದಲ್ಲೇ ಮಾಡೆಲಿಂಗ್ ಶುರು ಮಾಡಿ, 2003ರಲ್ಲಿ ಸಿನಿಮಾಗೆ ಬಂದ ಬಳಿಕ ಆಟವಾಡಲು ಬಿಡುವಿಲ್ಲದೇ ಹೋಯಿತು. ಹಿಂದಿ ಮಾತ್ರವಲ್ಲ, ದಕ್ಷಿಣದ ಬಹುತೇಕ ಭಾಷೆಗಳಲ್ಲೂ ನಟಿಸಿ ಮಿಂಚಿರುವ ಜೆನೆಲಿಯಾ ಸದ್ಯಕ್ಕೆ ಬ್ಯುಸಿ ನಟಿ. 'ಮದುವೆ ಯಾವಾಗ?' ಎಂದು ಕೇಳಿದರೆ, 'ನನಗಿನ್ನೂ 25' ಎಂದು ಕೆನ್ನೆಯಲ್ಲಿ ಗುಳಿ ಬೀಳಿಸಿ ನಗುತ್ತಾಳೆ.

■ ಬಿಂದು

